ಈಗಾಗಲೇ 'ಕಾಯಕಲ್ಪ' ಎನ್ನು ಯೋಜನೆ ಇದೆ. 7.30 ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ವೃತ್ತಿರಂಗಭೂಮಿ ಕಲಾವಿದರಿಗೆ ಅನುದಾನವಾಗಿ ನೀಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬೇಡಿಕೆ ಬಂದಾಗ ಅದರ ಬಗ್ಗೆ ಮಾತನಾಡೋಣ. ಪಾಪ ಅವರು ಬಹಳ ದೂರದಲ್ಲಿದ್ದಾರೆಂದು ನಾನು ತಮಗೆ ಹೇಳುತ್ತೇನೆ. ವೃತ್ತಿ ರಂಗಭೂಮಿ ನಟರೆಲ್ಲಾ ನೆಲಕಚ್ಚಿ ಬಹಳ ಜನ ಉಸಿರಿಲ್ಲದೆ ಹೋಗಿದ್ದಾರೆ.

ಶ್ರೀರಂಗ ಪಟ್ಟಣದ ಸಮೀಪ ಹೊಸ ಕಾರ್ಖಾನೆ ತೆರೆಯಲು ಅನುಮತಿ.

1476 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಸಮೀಪ ಹೊಸದಾಗಿ ಕಾರ್ಖಾನೆ ತೆರೆಯಲು ಪರಿಸರ ಮತ್ತು ಮಾಲಿನ್ಯ ಮಂಡಳಿ ಅನುಮತಿ ನೀಡಿದೆಯೇ.

ಆ) ಶ್ರೀರಂಗಪಟ್ಟಣದ ಬಳಿ ಕೈಗಾರಿಕೆ ಸ್ಥಾಪಿಸಲು ಅನುಮತಿ ನೀಡುವುದರಿಂದ ರಂಗನತಿಟ್ಟು ಪಕ್ಷಿಧಾಮಕ್ಕೆ ಧಕ್ಕೆ ಯಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು) :

ಅ) ಹೌದು, ಹತ್ತು ಟಿ.ಪಿ.ಡಿ. ಪ್ರಮಾಣದ ಎಲೆಕ್ಟ್ರಿಕಲ್ ಗ್ರೇಡ್ ಇನ್ಸ್ಯೂಲೇಷನ್ ಪ್ರೆಸ್ ಬೋರ್ಡ್ಸ್ ಮತ್ತು ಪ್ರಿ ಕಂಪ್ರೆಸ್ಡ್ ಬೋರ್ಡ್ಸ್ ತಯಾರಿಸುವ ಕಾರ್ಖಾನೆಗೆ ಇತರ ಷರತ್ತುಗಳಲ್ಲದೆ ಪರಿಸರ ಇಲಾಖೆಯಿಂದ ಪರಿಸರ ವಿಮೋಚನಾ ಸಮಿತಿಯ ಸಹಮತಿಯನ್ನು ಪಡೆಯುವ ಷರತ್ತನ್ನು ವಿಧಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮತಿ ನೀಡಿತ್ತು. ಈಗ ಕಾರ್ಖಾನೆಯವರು ತಮ್ಮ ಅರ್ಜಿಯನ್ನು ಸ್ವ ಇಚ್ಛೆಯಿಂದ ಹಿಂತೆಗೆದುಕೊಂಡಿರುತ್ತಾರೆ.

ಆ) 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಶ್ರೀ. ಎಲ್.ಆರ್. ಶಿವರಾಮೇಗೌಡರವರ ಪ್ರಶ್ನೆಯನ್ನು ಜೆ.ಬಿ. ಶಿವಕುಮಾರ್‌ರವರು ಕೇಳುತ್ತಾರೆ.

ಶ್ರೀ ಜೆ.ಪಿ. ಶಿವಕುಮಾರ್ (ಶ್ರೀ ಎಲ್.ಆರ್. ಶಿವರಾಮೇಗೌಡರ ಪರವಾಗಿ) : ಮಾನ್ಯ ಅಧ್ಯಕ್ಷರೆ. ಉತ್ತರದಲ್ಲಿ ಯಾರೋ ಒಂದು ಕಂಪನಿಯವರು ಕೇಳಿದ್ದರು, ಈಗ ಕಾರ್ಖಾನೆಯವರೆ, ತಮ್ಮ ಅರ್ಜಿಯನ್ನು ಸ್ವಇಚ್ಛೆಯಿಂದ ಹಿಂತೆಗೆದುಕೊಂಡಿರುತ್ತಾರೆ ಎಂದು ಹೇಳಿರುವುದು ಸ್ಪಷ್ಟವಾಗಿದೆ. ಇದರ ಪ್ರಾಮುಖ್ಯತೆಯನ್ನು ಹೇಳಬೇಕೆಂದರೆ, ನಮ್ಮ ಜಿಲ್ಲೆಯಲ್ಲಿರತಕ್ಕಂತಹ ಬಲಮುರಿ ಕ್ಷೇತ್ರ ಹಾಗೂ ರಂಗನತಿಟ್ಟು ಇಡೀ ಪ್ರಪಂಚಾದ್ಯಂತ ಖ್ಯಾತಿಯನ್ನುಗಳಿಸಿರತಕ್ಕಂತಹದ್ದು. ಪ್ರಕೃತಿದತ್ತವಾಗಿ ಬಂದಿರತಕ್ಕಂತಹ ಈ ನೈಸರ್ಗಿಕ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಈಗ ತಡೆಕೊಟ್ಟಿರುವುದರ ಜೊತೆಗೆ, ಯಾವುದೇ ಒತ್ತಡ ಬಂದರೂ ಸಹ ಇಂತಹ ಸ್ಥಳಗಳಲ್ಲಿ ಯಾವುದೇ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಕೊಡಬಾರದು. ಈಗ ಅದನ್ನು ಪ್ರಾರಂಭ ಮಾಡಲು ಅನುಮತಿಯನ್ನು ಕೊಟ್ಟಿದ್ದರು, ಅಲ್ಲಿಯ ಸ್ಥಳೀಯ ಜನರು ಪ್ರತಿರೋಧ ವ್ಯಕ್ತ ಮಾಡಿದ್ದರಿಂದ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೆ ಅರ್ಜಿಯನ್ನು ಹಾಕಿದಂಥ ಆ ಮನುಷ್ಯ ವಾಪಸ್ ತೆಗೆದುಕೊಂಡ. ಇಲ್ಲದಿದ್ದರೆ ಆತ ಏನಾದರೂ

ಮಾಡಿ ಇಲಾಖೆಯವರನ್ನು ಶಾಮೀಲು ಮಾಡಿಕೊಂಡು ಅನುಮತಿಯನ್ನು ಪಡೆದುಕೊಳ್ಳುತ್ತಿದ್ದನೋ ಏನೂ ಇವತ್ತು ಬಲಮುರಿ ಕ್ಷೇತ್ರ, ಮೊನ್ನೆ ಕೆ.ಆರ್.ಎಸ್. ಅಣೆಕಟ್ಟೆಯಿಂದ ನೀರು ಬಿಟ್ಟಿದ್ದರಿಂದ ನೀರು ತುಂಬಿ ಇವತ್ತು ಎಷ್ಟು ಹಾಳಾಗಿದೆ ಎನ್ನುವುದು ಕೂಡ ತಮಗೆ ಗೊತ್ತಿದೆ. ಅದರ ಜೊತೆಗೆ ಈ ರೀತಿಯ ಕಾರ್ಖಾನೆಗಳು ಬಂದು ಅಲ್ಲಿ ಮಲಿನ ಮಾಡಿದರೆ, ಆ ಪ್ರಕೃತಿ ದತ್ತವಾಗಿ ಬಂದಿರತಕ್ಕಂತಹ ನೈಸರ್ಗಿಕ ಸಂಪತ್ತು ಹಾಳಾಗುತ್ತದೆ. ಸರ್ಕಾರ, ಇದರ ಜೊತೆಗೆ ಇನ್ನು ಮುಂದೆ ಕಟ್ಟುನಿಟ್ಟಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು ನನ್ನ ಆಗ್ರಹ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಸದಸ್ಯರು ಹೇಳತಕ್ಕಂಥದ್ದು ಬಹಳ ಒಳ್ಳೆಯ ಸಲಹೆ ಎಂದು ನಾನು ಭಾವನೆ ಮಾಡಿದ್ದೇನೆ. ಈಗಾಗಲೇ ರಂಗನತಿಟ್ಟು ಸಮೀಪ ಯಾವುದೇ ಇಂಡಸ್ಟ್ರೀ ಕೊಡಬಾರದೆಂದು ತೀರ್ಮಾನ ತೆಗೆದುಕೊಂಡ ಆವರ ಮೇಲೆ ಕ್ರಮವನ್ನು ತೆಗೆದುಕೊಂಡು ಬಿಟ್ಟಿದ್ದೇನೆ. ಇನ್ನು ಮುಂದೆ ಯಾವ ಅಧಿಕಾರಿ ಬಂದರೂ ಸಹಿತ ಅಲ್ಲಿ ಕೊಡುವಂತಿಲ್ಲ. ಅವರು ಕೊಟ್ಟಿರುವ ಸಲಹೆ ಬಹಳ ಸೂಕ್ತವಾಗಿದೆ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆ ಕಾರ್ಯಕ್ರಮ ಮಾಡುತ್ತದೆ

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಇಷ್ಟೂಂದು ಪ್ರಸಿದ್ಧಿಯಾದ ಸ್ಥಳದಲ್ಲಿ ಈ ನಿಮ್ಮ ಮಾಲಿನ್ಯ ನಿಯಂತ್ರಣ ಮಂಡಳೀಯವರು ಒಳ್ಳೆ ಸಬ್ ರಿಜಿಸ್ಟ್ರಾರ್ ತರಹ ಕೆಲಸ ಮಾಡುತ್ತಿದ್ದಾರೆ. ಹೇಗೆ ಇವರು ಅನುಮತಿ ಕೊಟ್ಟರು? ಇಲಾಖೆ ಯಾವ ರೀತಿ ಕೆಲಸ ಮಾಡುತ್ತಿದೆ? ಎಂದು ನನಗನ್ನಿಸುತ್ತದೆ. ರಂಗನತಿಟ್ಟು ಬಹಳ ಪ್ರಸಿದ್ಧಿಯಾದ ಸ್ಥಳ ಸುಪ್ರಸಿದ್ಧವಾದಂಥ ಪಕ್ಷಿಗಳು ವಾಸ ಮಾಡುತ್ತಿರತಕ್ಕಂಥ ಸ್ಥಳದಲ್ಲಿ ಆ ಊರಿನ ಜನ ಪ್ರತಿಭಟನೆ ಮಾಡುತ್ತಾರೆಂದು ಗೊತ್ತಿದ್ದೂ, ಮಾಲಿನ್ಯ ಕೆಡುತ್ತೆ ಎಂದು ಗೊತ್ತಿದ್ದ ಮಾಲಿನ್ಯ ಇಲಾಖೆಯವರು ಅನುಮತಿ ಕೊಡುತ್ತಾರಲ್ಲ, ಆ ಫ್ಯಾಕ್ಟರಿಯವರ ಬಗ್ಗೆ ನಮಗೆ ಸಂತೋಷವಿದೆ. ಏಕೆಂದರೆ ಅವರು ವಾಪಸ್ಸಾಗದುಕೊಂಡಿದ್ದಾರೆ. ನಿಮ್ಮ ಇಲಾಖೆಯವರು ಅನುಮತಿ ಕೊಟ್ರಲ್ಲ ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಅದು ಮಾಲಿನ್ಯ ಇಲಾಖೆಯೋ ಅಥವಾ ಅಮಾಲಿನ್ಯ ಇಲಾಖೆಯೋ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಅಧ್ಯಕ್ಷರು : ಎಲ್ಲೋ ಇಲಾಖೆಯಲ್ಲಿ ಮಾಲಿನ್ಯ ಇರುತ್ತದೆ ಅದನ್ನು ತೊಳೆಯುತ್ತೇವೆ ಎಂದು ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಮಾನ್ಯ ಅಧ್ಯಕ್ಷರೇ ಸಾರ್ವಜನಿಕರ ದೂರು ಇನ್ನು ನನಗೆ ಬಂದಿರಲಿಲ್ಲ, ಪತ್ರಿಕೆಯಲ್ಲಿ ಬಂದ ತಕ್ಷಣ ಆ ಕಟಿಂಗ್ ಆಧಾರದಮೇಲೆ ನಾನು ಸ್ಟೇ ಕೊಟ್ಟು ಆ ಪಾರ್ಟಿಗೆ ಓಯರ್ ಮಾಡಿದೆ. ಅದನ್ನು ವಿಥ್ಡ್ರಾ ಮಾಡಿದೆ....

ಅಧ್ಯಕ್ಷರು : ಅವರು ಹೇಳುವುದು ಇಲಾಖೆಯಲ್ಲಿ ಎಲ್ಲೋ ಮಾಲಿನ್ಯ ಇದೆ ಎಂದು ಅದನ್ನು ತೊಳೆಯುತ್ತೇವೆಂದು ಹೇಳಿ.

ಶ್ರೀ ಪಿ.ಸಿ. ಸಿದ್ದನಗೌಡರ್ : ಆಯಿತು ಅದನ್ನು ಸರಿಯಾಗಿ ಕ್ಲೀನ್ ಮಾಡುತ್ತೇವೆ. ಆಸಿಡ್ ಹಾಕಿ ತೊಳೆಯುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ ಹಾಗಲ್ಲ, I really appreaciate the Minister. ಇಂತಹ ಒಂದು ಇಲಾಖೆಯಲ್ಲಿ ಅಧಿಕಾರಿಗಳು ಯಾರು ಇದಕ್ಕೆ ಷರತ್ತು ಹಾಕಿ ಕಂಡಿಷನ್ ಹಾಕಿ ಕೊಟ್ಟಿದ್ದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಂಡ್ಡೀರಿ. I want a specific Answer from the Minister. Do you take any action?

ಅವರನ್ನು ಸಸ್ಪಂಡ್ ಮಾಡಿದ್ದೀರಾ?

ಶ್ರೀ ಪಿ. ಸಿ. ಸಿದ್ದನಗೌಡರ್ : ಮಾಡಿದ್ದೇನೆ. ಅದನ್ನೇ ಹೇಳಿದೆ. ಅದನ್ನು ನಾನು ಸದಸ್ಯರು ಮೊದಲನೆಯ ಪ್ರಶ್ನೆಗೆ ಉತ್ತರದಲ್ಲಿ ಹೇಳಿದೆ. ಅವರು ಕೇಳಿದ್ದಿಲ್ಲ, ಆದರೂ ಹೇಳಿದ್ದೇನೆ. ಈ ರೀತಿ ಕೊಡಕೂಡದು ಎಂದು ಹೇಳಿದ್ದೇನೆ. ಅದಕ್ಕಾಗಿ ಅಲ್ಲಿ ಒಬ್ಬ ಅಧಿಕಾರಿಯನ್ನು ಸಸ್ಪಂಡ್ ಮಾಡಿದ್ದೇನೆ. ಅವರಿಗೆ ಬೇರೆ ಕಡೆ ಕಳಿಸಿದ್ದೇನೆ. ಇನ್ನು ಮನೆಗೆ ಕಳುಹಿಸಿ ಎಂದರೆ ಕಳಿಸುತ್ತೇನೆ. ಅದಕ್ಕಲ್ಲಿ ಏನೂ ಮುಲಾಜಿಲ್ಲ.

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೇ, ರಂಗನತಿಟ್ಟು ಪ್ರದೇಶ ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದೆ. ಅಲ್ಲಿ ಬಹಳಷ್ಟು ಪಕ್ಷಿ ಸಂಕುಲ ಇದೆ. ಇದು ಬಹಳ ಒಳ್ಳೆಯ ಕೆಲಸವಾಯಿತು. ಇಲ್ಲದೆ ಹೋಗಿದ್ದರೆ ಅಲ್ಲಿ ಬಹಳ ಕಷ್ಟವಾಗುತ್ತಿತ್ತು. ಅಲ್ಲಿ ಈಗಾಗಲೇ ನೀರು ಜಾಸ್ತಿ ಬಂದು ಬಹಳಷ್ಟು ಪಕ್ಷಿಗಳು ಅಲ್ಲಿ ತೊಂದರೆ ಅನುಭವಿಸುತ್ತಿವೆ. ಈ ರೀತಿಯ ಒಳ್ಳೆಯ ಅಭಿಪ್ರಾಯ ತೆಗೆದುಕೊಂಡು ನಮ್ಮ ಸರ್ಕಾರದವರು ಬಹಳ ಅನುಕೂಲ ಮಾಡಿಕೊಟ್ಟಿದ್ದಾರೆ, ಅದಕ್ಕಾಗಿ ತುಂಬಾ ಸಂತೋಷವಾಗಿದೆ.

ಕೋಲಾರ ಜಿಲ್ಲೆಯ ಗ್ರಾನೈಟ್ ಗುತ್ತಿಗೆಗಳ ಬಗ್ಗೆ

1485 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್ '94 ರಿಂದ 31-7-95ರವರೆಗೆ ಸರ್ಕಾರದಿಂದ ಕೋಲಾರ ಜಿಲ್ಲೆಯಲ್ಲಿ ಮಂಜೂರಾದ ಗ್ರಾನೈಟ್ ಗಣಿ ಗುತ್ತಿಗೆಗಳು ಎಷ್ಟು? ಮತ್ತು ಅವರಲ್ಲಿ ಪರಿಶಿಷ್ಟ ಜಾತಿ / ವರ್ಗ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಗುತ್ತಿಗೆದಾರರೆಷ್ಟು?

ಶ್ರೀ ಎಸ್.ಓ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಸದರಿ ಅವಧಿಯಲ್ಲಿ ಯಾವ ಕಲ್ಲುಗಣಿ ಗುತ್ತಿಗೆಯನ್ನು ನೀಡಿರುವುದಿಲ್ಲ.

ಅಧ್ಯಕ್ಷರು : ಬ್ಯೂಟಿಫುಲ್ ಶುದ್ಧ ಕನ್ನಡ

ಶ್ರೀ ಎಸ್. ರಾಜೇಂದ್ರನ್ : ಅಧ್ಯಕ್ಷರೆ ಇಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನ್ನ ಪ್ರಶ್ನೆ ಏನು ಎಂದು "the number of granite leases issued by the Government of Karnataka in Kolar District from December 94 till 31.7.95 and out of which the number of persons belonging to SCs/STs and minorities ಎಷ್ಟು-ಎಷ್ಟು ಬಗ್ಗೆ ಏನೂ ಹೊಟ್ಟಿಲ್ಲವೆಂದು. ಪಾಲಿಸಿ ಏನು ಅಡಾಪ್ಟ್ ಮಾಡಿದ್ದೀರಿ?

ಹೊಸ ಪಾಲಿಸಿ ಏನಾದರೂ ಮಾಡುತ್ತಿದ್ದೀರೋ? The answer given is, 'no leases have been granted during this period'.

ಎಸ್ಸಿ-ಎಸ್ಟಿಯವರಿಗೆ ಅವಕಾಶ ಕೊಡುವುದಕ್ಕೆ ನೀವು ಏನಾದರೂ ಪಾಲಿಸಿ ಇಟ್ಟುಕೊಳ್ಳುತ್ತೀರಾ? ರಿಸರ್ವೇಶನ್ ಪಾಲಿಸಿ ತರಹ ಒಂದು ಜಿಲ್ಲೆಗೆ ಎರಡು ಮೂರು ಕೊಡುತ್ತೀರೋ? ನಾವೂ ಎಕ್ಸ್ಪೋರ್ಟ್ ಮಾಡಬೇಕು ಸ್ವಾಮಿ., ನಾವೂ ಹಣ ಕೊಡಬೇಕು, ನಾವೂ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಬೇಕು. ನಮ್ಮ ಕಮ್ಯೂನಿಟಿಯವರೂ ಮುಂದೆ ಬರುವುದಕ್ಕೆ ಸರ್ಕಾರದವರು ಏನಾದರೂ ಸಹಾಯ ಮಾಡುತ್ತೀರೋ? ದಯವಿಟ್ಟು ಇವರ ಬಗ್ಗೆ ತಾವು ಏನಾದರೂ ಮಾಡಿ.

ತಾವು ಈಕ್ವಾಲಿಟಿ ಆಫ್ ಲಾ ಬಗ್ಗೆ ಏನಾದರೂ ಮಾಡಿ ಸ್ವಲ್ಪ